ಅಸಲು ದಾವಾ ನಂಃ 50/2018

ಪಿ.ಡಬ್ಲೂ 1

## 4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು: **18-02-2026**

**ಪಾಟೀಸವಾಲುಃ ಪ್ರತಿವಾದಿ ನಂ-19, 20, 23 ಪರ ವಕೀಲರಿಂದ**

ಪ್ರತಿವಾದಿ ನಂ -19, 20 , 23 ರವರನ್ನು ಈ ದಾವೆಯಲ್ಲಿ ಸೇರಿಸಲು ಅವರ ಹೆಸರು ವಿಳಾಸವನ್ನು ಯಾರು ಕೊಟ್ಟಿದ್ದರು ಎಂದರೆ ಸಾಕ್ಷಿಯು ಸದರಿಯವರ ಹೆಸರು ವಿಳಾಸ ನನಗೆ ಗೊತ್ತಿತ್ತು ಎಂದು ಹೇಳುತ್ತಾರೆ. ಈ ಮೊದಲು ಸದರಿಯವರನ್ನು ಏಕೆ ಪ್ರತಿವಾದಿಯರನ್ನಾಗಿ ಸೇರಿಸಲಿಲ್ಲ ಎಂದರೆ ಸಾಕ್ಷಿಯು ಟೆನನ್ಸಿ ಆಸ್ತಿಯಲ್ಲಿ ಅವರಿಗೆ ಹಕ್ಕು ಇಲ್ಲ ಎಂದು ನಾನು ತಿಳಿದಿದ್ದು ಆದ್ದರಿಂದ ಅವರನ್ನು ಸೇರಿಸಿಲ್ಲ.

ನನ್ನ ವಾದ ಪತ್ರದ ಮೂರನೇ ಪ್ಯಾರಾದಲ್ಲಿ ಸದರಿ ಪ್ರತಿವಾದಿಯರು ಅವಶ್ಯಕ ಪಕ್ಷಗಾರ ಅಲ್ಲ ಎಂದು ಬರೆಸಿದ್ದೆನೆ ಎಂದರೆ ಸಾಕ್ಷಿಯು ಟೆನನ್ಸಿ ಆಸ್ತಿಯಲ್ಲಿ ಹಕ್ಕು ಇಲ್ಲ ಎಂದು ಬರೆಸಿರುವುದಾಗಿ ಹೇಳುತ್ತಾರೆ. ದಾವೆಯಲ್ಲಿ ಟೆನನ್ಸಿ ಆಸ್ತಿ ಸ್ವಂತ ಆಸ್ತಿ ಹಾಗೂ ಮಹಾನಗರ ಪಾಲಿಕೆಯಲ್ಲಿ ಬರುವ ಆಸ್ತಿಗಳು ಇವೆ ಎಂದರೆ ಸರಿ. ನನಗೆ ಮಹಾನಗರ ಪಾಲಿಕೆಯ ಸದಸ್ಯ ಮಂಜುನಾಥ ಬಡಕುರಿ ಅವರು ಪರಿಚಯ ಇದ್ದಾರೆ ಎಂದರೆ ಸರಿ. ಅವರ ಮಾತು ಕೇಳಿ

ಅಸಲು ದಾವಾ ನಂಃ 50/2018

ಪಿ.ಡಬ್ಲೂ 1

ನಾನು ಈ ಸುಳ್ಳು ದಾವೆ ಹಾಕಿದ್ದೆನೆ ಎಂದರೆ ಸರಿಯಲ್ಲ. ಈ ಪ್ರಕರಣದ ಪ್ರತಿವಾಯರು ನನ್ನ ಸಂಬಂಧಿಕರಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ಓ.ಎಸ್. ಎಫ್. ಆರ್.ನಂ.537/2015 ವಾದ ಪತ್ರದ ದೃಡಿಕೃತ ನಕಲನ್ನು ತೋರಿಸಿ ಅದರಲ್ಲಿರುವ ಸಹಿ ಆತನದೇ ಎಂದು ಒಪ್ಪಿಕೊಂಡಿದ್ದು ಆ ವಾದ ಪತ್ರವನ್ನು ನಿಡಿ.6 ಎಂದು ಗುರುತಿಸಲಾಯಿತು. ಸದರಿ ಓ.ಎಸ್.ಎಫ್.ಆರ್.ನಂ .537/2015 ರಲ್ಲಿ ಯಾವ ಯಾವ ಅರ್ಜಿ ಹಾಕಿದ್ದೆವು ಎಂದು ನನಗೆ ನೆನಪಿಲ್ಲ. ಸದರಿ ದಾವೆಯಲ್ಲಿ ನಾನು ಪ್ರತಿವಾದಿ ನಂ-19, 20, 23 ರವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ನನಗೆ ಸರಿಯಾದ ಮಾಹಿತಿ ಇಲ್ಲದೇ ಇರುವ ಕಾರಣ ಹಾಗೂ ನಾನು ನ್ಯಾಯಾಲಯಕ್ಕೆ ಹೋಗದೆ ಇರುವ ಕಾರಣ ಆ ದಾವೆ ವಜಾ ಆಗಿರುತ್ತದೆ. ಸದರಿ ದಾವೆಗೆ ಮಾಹಿತಿ ನಾನೇ ಕೊಟ್ಟಿದ್ದೆ ಆದರೆ ಸರಿಯಾಗಿ ನ್ಯಾಯಾಲಯಕ್ಕೆ ಹೋಗದೆ ಇರುವ ಕಾರಣ ಅದು ವಜಾ ಆಗಿರುತ್ತದೆ. ಸದರಿ ದಾವೆಯಲ್ಲಿ ದಾವಾ ಆಸ್ತಿಗಳನ್ನು ಮಾರಾಟ ಮಾಡಬಾರದು ಎಂದು ಹಾಗೂ ವಾದ ಪತ್ರದ ತಿದ್ದುಪಡಿಗೆ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಗಳ ಮೇಲೆ ಯಾವುದಾದರೂ ಆದೇಶ ಆಗಿದೆ ಎಂದರೆ ಸಾಕ್ಷಿಯು ನಾನು ದಾವೆ ವಾಪಸ್ಸ ಪಡೆದುಕೊಂಡಿರುವುದರಿಂದ ಅದು ವಜಾ ಆಗಿದೆ ಎಂದು ಹೇಳುತ್ತಾರೆ. ಸದರಿ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಓ.ಎಸ್.ನಂ. 264/2012 ಸಲ್ಲಿಸಿದ್ದೆ ಎಂದರೆ ಸಾಕ್ಷಿಯು ವಾರಸಾ ವಿಚಾರವಾಗಿ ಆ ದಾವೆಯನ್ನು ಸಲ್ಲಿಸಿದ್ದೆ ಎಂದು

ಹೇಳುತ್ತಾರೆ. ಸದರಿ ದಾವೆಯಲ್ಲಿ ನಮ್ಮ ಅಜ್ಜಿ ತಕರಾರು ಸಲ್ಲಿಸಿದ್ದರಿಂದ ಆ ದಾವೆ ವಜಾ ಆಗಿರುತ್ತದೆ.

ಪ್ರಸ್ತುತ ದಾವೆಯಲ್ಲಿ ಮೇಲೆ ಹೇಳಿದ ಓ.ಎಸ್.ಎಫ್.ಆರ್.ನಂ .537/2015 ಹಾಗೂ ಓ.ಎಸ್.ನಂ. 264/2012 ರ ಬಗ್ಗೆ ನಮೂದು ಮಾಡಿದ್ದೆನೋ ಇಲ್ಲವೋ ನನಗೆ ನೆನಪಿಲ್ಲ. ಸದರಿ ನಾನು ಸಲ್ಲಿಸಿದ ದಾವೆಗಳಿಗೆ ನಮೂದು ಮಾಡಿದ ಕಾರಣಗಳು ಬೇರೆ ಬೇರೆ ಇವೆ ಎಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿರುವ ಪ್ರತಿವಾದಿಯರು ಈ ಹಿಂದೆ ಸಲ್ಲಿಸಿದ ದಾವೆಯಲ್ಲಿ ಪ್ರತಿವಾದಿಯರನ್ನಾಗಿ ಮಾಡಿರಲಿಲ್ಲ ಎಂದರೆ ಸಾಕ್ಷಿಯು ಆ ಸಮಯದಲ್ಲಿ ಅವರ ಬಗ್ಗೆ ನನಗೆ ಗೊತ್ತಿರಲಿಲ್ಲ ಎಂದು ಹೇಳುತ್ತಾರೆ.

ಓ.ಎಸ್.ನಂ. 264/2012 ರ ವಾದ ಪತ್ರದಲ್ಲಿ ನನ್ನ ವಿದ್ಯಾಭ್ಯಾಸ ಬಿಜಾಪುರ ಜಿಲ್ಲೆಯ ಇಂಚಗೇರಿ ಮಠದಲ್ಲಿ ಆಗಿದೆ ಎಂದು ಬರೆಸಿದ್ದೆನೆ ಸಾಕ್ಷಿಯು ಮೊದಲು ನವಲೂರಿನಲ್ಲಿ ನಂತರ ಅಲ್ಲಿ ಓದಿದ್ದೆನೆ ಎಂದು ಹೇಳುತ್ತಾರೆ. ನಿಪಿ.15 ರಲ್ಲಿ ಗಂಡನ ಹೆಸರು ಬರೆದಿಲ್ಲ ಎಂದರೆ ಸರಿ. ನಿಪಿ.21 ಮತ್ತು 23 ರಲ್ಲಿ ನನ್ನ ಜನ್ಮ ದಿನಾಂಕ ಬೇರೆ ಬೇರೆ ಇದೆ ಎಂದರೆ ಸರಿ. ನನಗೂ ಹಾಗೂ ಪ್ರತಿವಾದಿ ನಂ-1 ರಿಂದ 8 ಹಾಗೂ 19 ರಿಂದ 23 ರವರ ಕುಟುಂಬಕ್ಕೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ತಾಯಿಯ ತವರು ಮನೆ ಧಾರವಾಡ ತಾಲೂಕ ಬೆಳ್ಳಿಗಟ್ಟಿ ಎಂದರೆ ಸರಿ. ನನ್ನ ತಾಯಿಯ ತವರು ಮನೆಯ ಹೆಸರು ಕಲ್ಲೂರ ಎಂದರೆ ಸರಿ. ನನ್ನ

ತಾಯಿ ಲಿಂಗಾಯತ ಸಮುದಾಯಕ್ಕೆ ಸೇರಿದವರು ಎಂದರೆ ಸರಿ. ಪ್ರತಿವಾದಿ ನಂ-19 ರಿಂದ 2 ದಾವಾ ಸ್ವತ್ತಿನಲ್ಲಿ ಹಕ್ಕು ಇದೆ ಎಂದರೆ ಸಾಕ್ಷಿಯ ಟೆನನ್ಸಿ ಸ್ವತ್ತಿನಲ್ಲಿ ಹೊರತು ಪಡಿಸಿ ಬೇರೆ ಆಸ್ತಿಯಲ್ಲಿ ಹಕ್ಕು ಇದೆ ಎಂದು ಹೇಳುತ್ತಾರೆ. ಪ್ರತಿವಾದಿ ನಂ-19 ರಿಂದ 23 ರವರು ಹಜಾರೆ ಮನೆತನಕ್ಕೆ ಅವರ ಸ್ವತ್ತಿನಲ್ಲಿ ಹಕ್ಕುಗಳನ್ನು ಬಿಟ್ಟುಕೊಟ್ಟಿಲ್ಲ ಎಂದರೆ ಸಾಕ್ಷಿಯು ಸದರಿಯವರಿಗೆ ಟೆನನ್ಸಿ ಸ್ವತ್ತಿನಲ್ಲಿ ಹೊರತು ಪಡಿಸಿ ಬೇರೆ ಆಸ್ತಿಯಲ್ಲಿ ಹಕ್ಕು ಇದೆ ಎಂದು ಹೇಳುತ್ತಾರೆ.

ನಾನು ಹಜಾರೆ ಮನೆತನಕ್ಕೆ ಸೇರದೆ ಇದ್ದರೂ ಸಹ ಸುಳ್ಳು ವಂಶವೃಕ್ಷ ತೋರಿಸಿ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ನಾನು ಕಂದಾಯ ಅಧಿಕಾರಿಗಳ ಜೊತೆ ಶಾಮಿಲಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹಜಾರೆ ಮನೆತನಕ್ಕೆ ಸೇರಿದವನಲ್ಲ ಆದ್ದರಿಂದ ನನಗೆ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಹಜಾರೆ ಮನೆತನಕ್ಕೆ ಆಗದೇ ಇರುವ ವ್ಯಕ್ತಿಗಳ ಮಾತು ಕೇಳಿ ಅವರಿಗೆ ತೊಂದರೆ ಕೊಡಲು ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಿದ್ದು, ಸದರಿ ಜನನ ಪ್ರಮಾಣ ಪತ್ರ ಆತನದ್ದೆ ಎಂದು ಒಪ್ಪಿಕೊಂಡಿದ್ದು ಅದನ್ನು ನಿಡಿ.7 ಎಂದು ಗುರುತಿಸಲಾಯಿತು. ನಿಪಿ.25 ಮತ್ತು ನಿಡಿ.7 ರಲ್ಲಿರುವ ವಿವರಣೆಗಳು ಬೇರೆ ಬೇರೆ ಇವೆ ಎಂದರೆ ಸಾಕ್ಷಿಯು ಕಾರ್ಪೊರೇಶನಲ್ಲಿ ನನ್ನ ಜನ್ಮ

ಅಸಲು ದಾವಾ ನಂಃ 50/2018

ಪಿ.ಡಬ್ಲೂ 1

ದಾಖಲೆ ರಜಿಸ್ಟರ ರದ್ದು ಆಗಿರುವುದರಿಂದ ನ್ಯಾಯಾಲಯದಲ್ಲಿ ಅಫಿಡೇವಿಟ ಮಾಡಿಸಿಕೊಂಡು ನಂತರ ಮಾಡಿಸಿದ್ದೆನೆ ಎಂದು ಹೇಳುತ್ತಾರೆ. ನಾನು ಕಾರ್ಪೊರೇಶನ ಅಫಿಡೇವಿಟ್ ಸಲ್ಲಿಸಿ ಜನನ ಪ್ರಮಾಣ ಪತ್ರ ಪಡೆದುಕೊಂಡಿದ್ದೆನೆ ಎಂದರೆ ಸರಿ. ನಾನು ಎಷ್ಟು ಅಫಿಡೇವಿಟ್ ಸಲ್ಲಿಸಿದ್ದೆನೆ ನನಗೆ ನೆನಪಿಲ್ಲ. ನಾನು ಜೀವಂತ ಸದಸ್ಯರ ಪ್ರಮಾಣ ಪತ್ರವನ್ನು ಒಮ್ಮೆ ಕೆಲಗೇರಿಯಲ್ಲಿ ವಾಸ ಇದ್ದೆನೆ ಹಾಗೂ ನವಲೂರಿನಲ್ಲಿ ವಾಸ ಇದ್ದೆನೆ ಎಂದು ಹೇಳಿ ಪಡೆದುಕೊಂಡಿದ್ದೆನೆ ಎಂದರೆ ಸಾಕ್ಷಿಯು ನಾನು ಈಗ ಕೇಲಗೇರಿಯಲ್ಲಿ ವಾಸ ಇದ್ದೆನೆ ಎಂದು ಹೇಳುತ್ತಾರೆ.

**ಉಳಿದ ಪಾಟೀ ಸವಾಲನ್ನು ಪ್ರತಿವಾದಿ ನಂ–1 ರಿಂದ 8 ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಲು ಕೇಳಿದ್ದು ಅನುಮತಿ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.

ಅಸಲು ದಾವಾ  ನಂಃ  50/2018

ಪಿ.ಡಬ್ಲೂ  1